# ಕರ್ನಾಟಕ ಚರಿತ್ರೆಗೆ ಇತಿಹಾಸಕಾರರಾದ ಷ.ಶೆಟ್ಟರ್ ಅವರ ಕೊಡುಗೆ

**ವೀರೇಶ ಬಡಿಗೇರ**
ಸಹಾಯಕ ಪ್ರಾಧ್ಯಾಪಕರು, ಜಿ.ವಿ.ಪಿ.ಪಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಹಗರಿಬೊಮ್ಮನಹಳ್ಳಿ, ವಿಜಯನಗರ.

**DOI: https://doi.org/10.5281/zenodo.18008824**

## ABSTRACT:

ಸ್ವಾತಂತ್ರ್ಯೋತ್ತರ ಭಾರತದ ಚರಿತ್ರೆ ರಚನಾಶಾಸ್ತ್ರದಲ್ಲಿ ಅತಿದೊಡ್ಡ ಹೆಸರು ಷ.ಶೆಟ್ಟರ್ ಅವರದ್ದು. ಮಧ್ಯಕಾಲೀನ ಹಾಗೂ ಪ್ರಾಚೀನ ಚರಿತ್ರೆ ಬರವಣಿಗೆಯಲ್ಲಿ ಅವರ ಬರಹಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಗೊಳಪಟ್ಟಿವೆ. ಇಂಗ್ಲಿಷ್ ಭಾಷೆಯಲ್ಲಿ ಅವರ ಆರಂಭಿಕ ಗ್ರಂಥಗಳು ಪ್ರಕಟಗೊಂಡರೂ ನಂತರದಲ್ಲಿ ಅವರು ಕನ್ನಡದಲ್ಲಿ ಬರೆದ ಗ್ರಂಥಗಳು ವಿದ್ವಾಂಸರ ಗಮನ ಸೆಳೆದವು. ಅವರ ಸಾಮಾಜಿಕ ಕಳಕಳಿ ಮತ್ತು ರಾಜಕೀಯ ಸಿದ್ಧಾಂತಗಳು ಎಲ್ಲ ಸಂದರ್ಭದಲ್ಲಿಯೂ ಜನಪರವಾಗಿರುವುದನ್ನು ನಾವು ಗಮನಿಸಬಹುದಾಗಿದೆ. ಕನ್ನಡ-ಕರ್ನಾಟಕ ಕೇಂದ್ರಿಕೃತವಾದ ನಂತರದ ಬರಹಗಳು ಕನ್ನಡದಲ್ಲಿ ಲಭ್ಯವಿದ್ದ ಅನೇಕ ಆಕರಗಳನ್ನು ಆಧರಿಸಿವೆ. ಅವು ಕರ್ನಾಟಕ ಚರಿತ್ರೆಯನ್ನು ಮರು ರಚಿಸಲು ಸಾಧ್ಯವಾಗಿವೆ.

## KEYWORDS:

ಚರಿತ್ರೆ, ಶಾಸನಶಾಸ್ತ್ರ, ಸಮಾಜಶಾಸ್ತ್ರ, ಸಾಹಿತ್ಯ ಹಾಗೂ ಬರಹ, ಸಮಾಜ ಚರಿತ್ರೆ, ಕುಶಲಕರ್ಮಿಗಳು.

**ಪೀಠಿಕೆ:**

ಸ್ವಾತಂತ್ರ್ಯೋತ್ತರ ಭಾರತದ ಚರಿತ್ರೆ ರಚನಾಶಾಸ್ತ್ರದಲ್ಲಿ ಅತಿದೊಡ್ಡ ಹೆಸರು ಷ.ಶೆಟ್ಟರ್ ಅವರದ್ದು. ಮಧ್ಯಕಾಲೀನ ಹಾಗೂ ಪ್ರಾಚೀನ ಚರಿತ್ರೆ ಬರವಣಿಗೆಯಲ್ಲಿ ಅವರ ಬರಹಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಗೊಳಪಟ್ಟಿವೆ. ಇಂಗ್ಲಿಷ್ ಭಾಷೆಯಲ್ಲಿ ಅವರ ಆರಂಭಿಕ ಗ್ರಂಥಗಳು ಪ್ರಕಟಗೊಂಡರೂ ನಂತರದಲ್ಲಿ ಅವರು ಕನ್ನಡದಲ್ಲಿ ಬರೆದ ಗ್ರಂಥಗಳು ವಿದ್ವಾಂಸರ ಗಮನ ಸೆಳೆದವು. ಅವರ ಸಾಮಾಜಿಕ ಕಳಕಳಿ ಮತ್ತು ರಾಜಕೀಯ ಸಿದ್ಧಾಂತಗಳು ಎಲ್ಲ ಸಂದರ್ಭದಲ್ಲಿಯೂ ಜನಪರವಾಗಿರುವುದನ್ನು ನಾವು ಗಮನಿಸಬಹುದಾಗಿದೆ. ಕನ್ನಡ-ಕರ್ನಾಟಕ ಕೇಂದ್ರಿಕೃತವಾದ ನಂತರದ ಬರಹಗಳು ಕನ್ನಡದಲ್ಲಿ ಲಭ್ಯವಿದ್ದ ಅನೇಕ ಆಕರಗಳನ್ನು ಆಧರಿಸಿವೆ. ಅವು ಕರ್ನಾಟಕ ಚರಿತ್ರೆಯನ್ನು ಮರು ರಚಿಸಲು ಸಾಧ್ಯವಾಗಿವೆ. ಅವರ ಬದುಕು ಮತ್ತು ಚರಿತ್ರೆ ಬರವಣಿಗೆಯನ್ನು ಮರು ಓದುಗೊಳಿಸುವ ಮತ್ತು ಮುಖಾಮುಖಿಗೊಳಿಸುವ ಉದ್ದೇಶವನ್ನು ಪ್ರಸ್ತುತ ಪ್ರಬಂಧವು ಹೊಂದಿದೆ.

ಚರಿತ್ರೆಯ ಬಹುಮುಖಿ ಆಯಾಮಗಳಾದ ರಾಜಕೀಯ, ಚಾರಿತ್ರಿಕ, ಸಾಂಸ್ಕೃತಿಕ, ಧಾರ್ಮಿಕ, ಸಾಹಿತ್ಯದ ನಿಲುವುಗಳಿಗೆ ಹೊಸ ಬಗೆಯ ರೂಪವೊಂದನ್ನು ಕೊಟ್ಟ ಕೀರ್ತಿ ಷ.ಶೆಟ್ಟರ್ ಅವರಿಗೆ ಸಲ್ಲುತ್ತದೆ. ಒಬ್ಬ ವ್ಯಕ್ತಿ ತನ್ನ ಜೀವಮಾನ ಸಂಶೋಧನೆಯನ್ನು ಶಿಲ್ಪಿ ಹಾಗೂ ವಾಸ್ತುಶಿಲ್ಪ ಕಲೆಯನ್ನು ಕುರಿತು ಅಧ್ಯಯನಕ್ಕೆ ಮೀಸಲಿಟ್ಟಿದ್ದರೆ ಅದು ಶೆಟ್ಟರ್ ಮಾತ್ರ. ಸಂಸ್ಕೃತಕ್ಕಿಂತ ಪ್ರಾಚೀನವಾದ ತಮಿಳು, ಶಾಸ್ತ್ರೀಯ ಭಾಷೆ ಸ್ಥಾನಮಾನ ಪಡೆಯಿತು. ಜಾಗತಿಕ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಭಾಷೆಗಳ ಪ್ರಾಚೀನತೆ ಗುರುತಿಸಲು ಹೊರಟಾಗ ಕನ್ನಡ ಭಾಷೆ ಅದಕ್ಕೆ ಸ್ಪಂದಿಸಲು ಪ್ರಾರಂಭಿಸಿತು. ವಿದ್ವಾಂಸರಾದ ಷ.ಶೆಟ್ಟರ್, ಚರಿತ್ರೆ, ಶಾಸನಶಾಸ್ತ್ರ, ಸಮಾಜಶಾಸ್ತ್ರ, ಸಾಹಿತ್ಯ ಹಾಗೂ ಬರಹ ಒಳಗೊಂಡ ಅಂತರ್ ಶಾಸ್ತ್ರೀಯ ಸಂಶೋಧನೆ

ಅನುಸರಿಸಿ "ಶಂಗಂ-ತಮಿಳಗಂ" ಮತ್ತು ಕನ್ನಡ ನಾಡು-ನುಡಿ: ಆರಂಭ ಕಾಲದ ದ್ರಾವಿಡ ಸಂಬಂಧದ ಚಿಂತನೆ (2007) ಮೂಲಕ ಕನ್ನಡಕ್ಕೆ ಚಾರಿತ್ರಿಕ ಹಿನ್ನೆಲೆ ನೀಡಿದರು. ಕನ್ನಡ ನುಡಿ ಚರಿತ್ರೆಗೆ ಹೊಸ ಸ್ಪರ್ಶ ನೀಡಿದ ಶೆಟ್ಟರ್ ಅವರ ಬರಹಗಳು ಮುಖ್ಯವಾಗಿ ಮುನ್ನೆಲೆಯ ಚರಿತ್ರೆಯು ಗುರುತಿಸಿಕೊಳ್ಳದ, ಚರಿತ್ರೆಯ ಪ್ರಾತಿನಿಧೀಕರಣ ನೀಡದ ಹಾಗೂ ಚರಿತ್ರೆಗೆ ತಮ್ಮದೇ ಆದ ಕೊಡುಗೆ ನೀಡಿದ ತಳ ಸಮುದಾಯಗಳ ಪರವಾಗಿ ಅವರ ಸಂಶೋಧನೆಗಳು ಬೆಳಕು ಚೆಲ್ಲುತ್ತವೆ ಹಾಗೂ ಅವರಿಗೆ ಇತಿಹಾಸದಲ್ಲಿ ಸ್ಥಾನ ಕಲ್ಪಿಸಿ ವಾಸ್ತವವಾಗಿ ಸಮಾಜ ಚರಿತ್ರೆಯ ಮರು ಅಧ್ಯಯನ ಮಾಡಿರುವುದನ್ನು ಕಾಣಬಹುದಾಗಿದೆ.

ಲಿಪಿ ವಿಕಾಸದ ಮೂಲಭೂತ ಪ್ರಶ್ನೆಗಳಾದ ಯಾರು ಬರೆದರು? ಯಾಕೆ ಬರೆದರು? ಯಾರು ಬರೆಸಿದರು? ಎಂಬ ಪ್ರಶ್ನೆಗಳಿಗೆ ಪ್ರೊ.ಶೆಟ್ಟರ್ ಉತ್ತರ ಹುಡುಕುತ್ತಾ ಹಲವು ಮಹತ್ವದ ಸಂಗತಿಗಳನ್ನು ಗುರುತಿಸಿದ್ದಾರೆ. ಸಂಸ್ಕೃತ ಭಾಷೆಯಲ್ಲಿ ಲಿಪಿ ಮೂಡಿಸಿದವರು ವೈದಿಕೇತರರಾದ ವಿಶ್ವಕರ್ಮರು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಎಂಟನೇ ಶತಮಾನದಲ್ಲಿ ವೈದಿಕ ವ್ಯವಸ್ಥೆ ಬಹುತೇಕ ಕುಸಿದು ಬಿದ್ದಾಗ ಆ ಸ್ಥಾನ ತುಂಬಲು ಮುಂದೆ ಬಂದವರು ಪೌರಾಣಿಕರು ಮತ್ತು ಶೂದ್ರರು ಎಂದು ಅವರು ವಾದಿಸಿದ್ದಾರೆ. ಸಂಸ್ಕೃತ ಭಾಷೆಯ ವ್ಯವಹಾರ ಬಹುತೇಕ ಬ್ರಾಹ್ಮಣ ಸಮುದಾಯದಲ್ಲಿ ನಡೆದಿದ್ದರಿಂದ ಉಳಿದ ಸಮುದಾಯಗಳು ಅದರ ಲಾಭ ಪಡೆಯುವುದಕ್ಕಿಂತ ಶೂದ್ರ ಸಮುದಾಯಗಳ ಭಾಷೆ ಮತ್ತು ಸಂಸ್ಕೃತಿಯಲ್ಲಿ ಕೊಡುಕೊಳೆ ಹೆಚ್ಚಾಗಿ ನಡೆದಿದೆ ಎಂಬುದನ್ನು ಶೆಟ್ಟರ್ ಶಾಸನಗಳ ಮೂಲಕ ತಿಳಿಹೇಳಿದ್ದಾರೆ.

ಕರ್ನಾಟಕದ ಸಾಹಿತ್ಯ, ಚರಿತ್ರೆ, ಲಿಪಿ, ಭಾಷೆ, ಭಾಷಾಶಾಸ್ತ್ರ, ಪ್ರಭುತ್ವ, ಬಹುತ್ವದ ಆಯಾಮಗಳು, ಕುಶಲಕರ್ಮಿ ಸಮುದಾಯಗಳು, ವಾಸ್ತುಶಿಲ್ಪ, ಸಾಮಾಜಿಕ ನಡೆಗಳು ಮೊದಲಾದ ಬಹುಮುಖಿ ಕ್ಷೇತ್ರಗಳ ಮರು ಓದಿಗೆ ಒಳಪಡಿಸಲು ಬೇಕಾಗಿರುವ ಅಧ್ಯಯನದ ಮಾದರಿಗಳು ಅವರ ಬಹುತೇಕ ಬರಹಗಳಲ್ಲಿ ಕಾಣಬಹುದು.

'ಸಂಗಂ ತಮಿಳಗಂ ಮತ್ತು ಕನ್ನಡ ನಾಡು-ನುಡಿ-ಆರಂಭ ಕಾಲದ ದ್ರಾವಿಡ ಸಂಬಂಧ ಚಿಂತನೆ' (2007) ಕೃತಿಯು ಶಂಗಂ ತಮಿಳಗಂ ಮತ್ತು ಕನ್ನಡ ನಾಡು-ನುಡಿಯನ್ನು ತೋಲ್ಗಾಪ್ಪಿಯರ್ ಮತ್ತು ಶಂಗಂ ಕಾವ್ಯ ಹಾಗೂ ಕವಿರಾಜಮಾರ್ಗಕಾರ ಇವರ ಕೃತಿಗಳನ್ನು ಅನುಸರಿಸಿಕೊಂಡು ಕನ್ನಡ-ತಮಿಳು ಭಾಷೆಗಳು ರೂಪಿಸಿಕೊಂಡ ಪಾರಂಪರಿಕ ಅನನ್ಯತೆ ನೆಲಗಳ ಹಿಂದಿರುವ ಪ್ರೇರಣೆ ಮತ್ತು ಪ್ರತಿಕ್ರಿಯೆಗಳನ್ನು ಅರ್ಥೈಸಿಕೊಳ್ಳುವ ಪ್ರಯತ್ನವಾಗಿದೆ. ಸೋಮನಾಥಪುರದ ದೇವಾಲಯದ ವಾಸ್ತು, ಶಿಲ್ಪ ಮತ್ತು ಆಚರಣೆಗಳ ಬಗ್ಗೆ ಸಮಗ್ರವಾದ ಮಾಹಿತಿಯನ್ನು ಸೋಮನಾಥಪುರ (2008) ಕೃತಿಯಲ್ಲಿ ಮೂಡಿಬಂದಿದೆ. ಕವಿ, ಕುಶಲ ಶಿಲ್ಪಿ ಮತ್ತು ಲಿಪಿಕಾರರನ್ನು ಹಿನ್ನೆಲೆಯಾಗಿಟ್ಟುಕೊಂಡು ಮೂಡಿಬಂದ ಕಪ್ಪೆ ಅರಭಟ್ಟನ ಶಾಸನ (2011) ಮತ್ತು ಬಾದಾಮಿ ಚಾಲುಕ್ಯರ ಶಾಸನ ಸಾಹಿತ್ಯ (2012) ಕೃತಿಗಳು ಶಿಲ್ಪಿಗಳ ಪ್ರಾತಿನಿಧಿಕರಣ ಮಾಹಿತಿ ನೀಡುತ್ತವೆ. ಜೈನ ಧಾರ್ಮಿಕ ಆಚರಣೆಯ ರೂಪದಲ್ಲಿದ್ದ ಮರಣವಿಧಿಯ ಅನುಸರಣೆಯನ್ನು ದಾಖಲಿಸುವ ನಿಷಿಧಿಗಳು ಹಾಗೂ ಹಳಗನ್ನಡ ಜೈನ ಸಾಹಿತ್ಯದಲ್ಲಿ ದೊರೆಯುವ ಮರಣಗಳ ಉಲ್ಲೇಖಗಳು ಹಾಗೂ ಅವುಗಳ ನಡುವಿನ ಸಂಬಂಧಗಳ ಕುರಿತಾಗಿ ಸಾವಿಗೆ ಆಹ್ವಾನ: ಶ್ರವಣಬೆಳಗೊಳದ ಧಾರ್ಮಿಕ ಇತಿಹಾಸದ ಹಿನ್ನೆಲೆಯಲ್ಲಿ ಮರಣ ಪ್ರಕ್ರಿಯೆಯ ಅಭ್ಯಾಸ (2012) ಮತ್ತು ಸಾವನ್ನು ಅರಸಿ: ಇಚ್ಛಾಮರಣದ ಜೈನಸಿದ್ಧಾಂತ ಮತ್ತು ಚಾರಿತ್ರಿಕ ಸಾದೃಶ್ಯಗಳು (2014) ಕೃತಿಗಳು ಜೈನ ಯತಿಗಳು ಕೈಕೊಳ್ಳುವ ಸಲ್ಲೇಖನ ಕ್ರಮಗಳ ಹಿಂದಿರುವ ತತ್ವಸಿದ್ಧಾಂತ ಮತ್ತು ಧಾರ್ಮಿಕ

ಆಚರಣೆಗಳನ್ನು ಆಕರಗಳ ಸಮೇತ ವಿವರಿಸಿದ್ದಾರೆ.

ಪೂರ್ವ ರಾಮಾನುಜ ಯುಗದಲ್ಲಿನ ಕರ್ನಾಟಕ ಶ್ರೀವೈಷ್ಣವ ಅಗ್ರಹಾರಗಳು ಕುರಿತ ವೈಷ್ಣವದಿಂದ ಶ್ರೀವೈಷ್ಣವಕ್ಕೆ (2020) ಕೃತಿಗಳು ಧಾರ್ಮಿಕತೆಯ ಅಂಶಗಳನ್ನೊಳಗೊಂಡು ಚಾರಿತ್ರಿಕ ಅಂಶಗಳ ಮೇಲೆ ಬೆಳಕು ಚೆಲ್ಲುತ್ತವೆ. ಸಾಹಿತ್ಯ ಚರಿತ್ರೆಯ ಒಂದು ಓದು, ಸಾಮಾಜಿಕ ಚರಿತ್ರೆಯ ಮರು ಓದು ಎಂಬ ಆಯಾಮವನ್ನಿಟ್ಟುಕೊಂಡು ಪ್ರಕಟಗೊಂಡ ಕೃತಿ ಹಳಗನ್ನಡ: ಲಿಪಿ, ಲಿಪಿಕಾರ, ಲಿಪಿ ವ್ಯವಸಾಯ ಸಂಪುಟ 1 (2014) ಮತ್ತು ಭಾಷೆಗೊಂದು ಚರಿತ್ರೆ ಮತ್ತು ಭಾಷಾ ಬಾಂಧವ್ಯಕ್ಕೊಂದು ಇತಿಹಾಸ ಎಂಬ ತಿರುಳನ್ನು ಹೊಂದಿರುವ ಹಳಗನ್ನಡ: ಭಾಷೆ, ಭಾಷಾ ವಿಕಾಸ, ಭಾಷಾ ಬಾಂಧವ್ಯ ಸಂಪುಟ 2 (2017) ಈ ಎರಡು ಮೇರು ಕೃತಿಗಳು ಕನ್ನಡ ಭಾಷಾ ಚರಿತ್ರೆಗೆ ಹೊಸ ಭಾಷ್ಯ ಬರೆದವು. ಪ್ರೊ.ಷ.ಶೆಟ್ಟರ್ ಅವರ ಆಯ್ದ ಭಾಷಣಗಳು ಒಳಗೊಂಡ ಕೃತಿ ಕರ್ನಾಟಕ– ಬಹುತ್ವದ ಆಯಾಮಗಳು (2018) ಪ್ರಾಕ್ತನಶಾಸ್ತ್ರದ ನೆಲೆಯಿಂದ ಕರ್ನಾಟಕದ ಚರಿತ್ರೆ, ಸಂಸ್ಕೃತಿ, ಭಾಷೆ, ಲಿಪಿ, ಶಾಸನಗಳಂತಹ ಮೊದಲಾದ ವಿದ್ಯಮಾನಗಳನ್ನು ಶೋಧಿಸುವ ಕೃತಿ ಪ್ರಾಕೃತ ಜಗದ್ವಲಯ (2018) ಈ ಕೃತಿಯ ಮೂಲ ಉದ್ದೇಶ ಕನ್ನಡದ ಪ್ರಾಚೀನತೆಯ ಹುಡುಕಾಟವಾಗಿದೆ. ರೂವಾರಿ (2019) ಈ ಕೃತಿಯಲ್ಲಿ ಮುಖ್ಯವಾಗಿ ಷ.ಶೆಟ್ಟರ್ ಅವರು ಪ್ರಾಚೀನ ಕರ್ನಾಟಕದಲ್ಲಿ ಕದಂಬರು, ಗಂಗರು ಮತ್ತು ಚಾಲುಕ್ಯರ ಹಾಗೂ ರಾಷ್ಟ್ರಕೂಟರ ಕಾಲದ ಶಿಲ್ಪಿಗಳು, ಲಿಪಿಕಾರರು ಮತ್ತು ಸಮಾಜದ ಬಹುಮುಖ್ಯ ಕುಶಲಕರ್ಮಿಗಳ ಬಗ್ಗೆ ಹಲವು ಅಧ್ಯಾಯಗಳ ಮೂಲಕ ಕಲಾವಿದರ ಚರಿತ್ರೆಯನ್ನು ಕಟ್ಟಿಕೊಟ್ಟಿದ್ದಾರೆ. ಇತಿಹಾಸಕಾರರಾಗಿ ಮಾತ್ರವಲ್ಲದೇ ಭಾಷಾ ಚರಿತ್ರೆಕಾರರಾಗಿ, ಸಾಮಾಜಿಕ ಚರಿತ್ರೆಯನ್ನು ಪುನಃ ರೂಪಿಸಿದವರಾಗಿಯೂ ಷ.ಶೆಟ್ಟರ್ ಕಂಡುಬರುತ್ತಾರೆ. ಅವರ ಬರಹಗಳಲ್ಲಿ ಕಂಡುಬರುವ ಸಂಶೋಧನಾ ವಿಷಯ, ವಿಚಾರ ಮತ್ತು ವೈಜ್ಞಾನಿಕ ವಿಧಾನಗಳು ಭಾರತದ ಚರಿತ್ರೆಗೆ ಬಹುಮುಖ್ಯ ಕೊಡುಗೆಗಳೆನಿಸಿವೆ.

ಕನ್ನಡ ಲಿಪಿ ಹಾಗೂ ಭಾಷೆಯ ಉಗಮ, ಬೆಳವಣಿಗೆ, ವೈವಿಧ್ಯತೆ, ಭಾಷಾ ಒಡನಾಟ, ಸಾಹಿತ್ಯಪ್ರಭೇದ, ಸಮಾಜ ಹಾಗೂ ಸಂಸ್ಕೃತಿಯ ಸ್ವರೂಪ ಮಾತ್ರವಲ್ಲದೇ ಇವನ್ನು ಬರೆದು ಕೊರೆದ ಶಿಲ್ಪಿಗಳ ಹಾಗೂ ಅವರನ್ನು ಪೋಷಿಸಿದವರ ಮೇಲೆ ಹೊಸಬೆಳಕು ಚೆಲ್ಲಬಲ್ಲ ಸಾಮರ್ಥ್ಯವಿರುವ ಶಾಸನಗಳನ್ನು ಬಳಸಿಕೊಂಡು ಲಿಪಿ, ಭಾಷೆ, ಸಾಮಾಜಿಕ ಚರಿತ್ರೆಗಳನ್ನು ಮೂಲ ಆಕರಗಳಾದ ಶಾಸನಗಳನ್ನು ಅನುಸರಿಸಿ ಪ್ರೊ.ಶೆಟ್ಟರ್ ಅವರು ರಚಿಸಿರುವ ಪ್ರಮುಖ ಕೃತಿಗಳು ಹಳಗನ್ನಡ: ಲಿಪಿ, ಲಿಪಿಕಾರ, ಲಿಪಿ ವ್ಯವಸಾಯ ಸಂಪುಟ 1 (2014) ಮತ್ತು ಭಾಷೆಗೊಂದು ಚರಿತ್ರೆ ಮತ್ತು ಭಾಷಾ ಬಾಂಧವ್ಯಕ್ಕೊಂದು ಇತಿಹಾಸ ಎಂಬ ತಿರುಳನ್ನು ಹೊಂದಿರುವ ಹಳಗನ್ನಡ: ಭಾಷೆ, ಭಾಷಾ ವಿಕಾಸ, ಭಾಷಾ ಬಾಂಧವ್ಯ ಸಂಪುಟ 2 (2017) ಇವು ಭಾಷಾ ಚರಿತ್ರೆ ಹಾಗೂ ಸಾಮಾಜಿಕ ಚರಿತ್ರೆಗಳ ಮೇಲೆ ಬೆಳಕು ಚೆಲ್ಲುವುದು ಅಷ್ಟೇ ಅಲ್ಲ ಬ್ರಾಹ್ಮಣೀಕರಣ ಮತ್ತು ಸಂಸ್ಕೃತಾನುಸರಣ ಎಂಬ ಒಂದೇ ನಾಣ್ಯದ ಎರಡು ಮುಖಗಳು ಅಥವಾ ಪ್ರತಿಪದಗಳು ಎಂಬುದನ್ನು ಅನುಮೋದಿಸುವುದಿಲ್ಲ. ಸಂಸ್ಕೃತ ಮತ್ತು ಕನ್ನಡ ಭಾಷಾ ವ್ಯವಹಾರಗಳ ಗುರಿಗಳು ಭಿನ್ನವಾಗಿದ್ದವು. ಸಂಸ್ಕೃತ ಭಾಷಾ ವ್ಯವಹಾರವು ಬಹುತೇಕ ಒಂದು ಸಮಾಜದ ಒಂದೇ ಬಗೆಯ ಕೊಡುಕೊಳ್ಳುವಿಕೆಗೆ ಸೀಮಿತವಾಗಿದ್ದರೆ, ಕನ್ನಡ ಭಾಷಾ ವ್ಯವಹಾರವು ಎಲ್ಲಾ ವರ್ಗಗಳ ಬಹುಮುಖೀ ಕೊಡುಕೊಳ್ಳುವಿಕೆಗೆ ವಿಸ್ತರಿಸಿಕೊಂಡಿತ್ತು. ಬೌದ್ಧರು–ಜೈನರು–ವೈದಿಕರು ಭಾಷಾರಾಜಕಾರಣದ ಮೂರು ನೆಲೆಗಳು ಎಂಬುದನ್ನು ಈ ಕೃತಿಗಳು ವಿವರಿಸುತ್ತವೆ.

ಪ್ರಾಚೀನ ಹಳಗನ್ನಡ ಶಾಸನಗಳನ್ನು ಆಕರವನ್ನಾಗಿಸಿಕೊಂಡು ಸಾಮಾಜಿಕ

ಚರಿತ್ರೆಯನ್ನು ಮರು ಓದಿಗೆ ಒಳಪಡಿಸಿದ ಪ್ರೊ.ಶೆಟ್ಟರ್ ಅವರು ಶಾಸನ ಹಾಗೂ ಜೈನ ಸಾಹಿತ್ಯದ ಆಕರಗಳನ್ನು ಅನುಸರಿಸಿ ರಚಿಸಲಾದ ಸಾವಿಗೆ ಆಹ್ವಾನ ಮತ್ತು ಸಾವನ್ನು ಅರಸಿ ಕೃತಿಗಳು ಜೈನ ಧಾರ್ಮಿಕತೆಯ ಪಾರಂಪರಿಕ ಆಚರಣೆಗಳಿಗೆ ಆಕರಗಳ ಸಮೇತ ದಾಖಲೆ ಒದಗಿಸಿ ಆಚರಣೆಗಳ ಪ್ರಾಮುಖ್ಯತೆಯನ್ನು ಈ ಕೃತಿಗಳಲ್ಲಿ ಕಾಣಬಹುದು. ಷ.ಶೆಟ್ಟರ್ ಅವರ ಬರಹಗಳು ಮುಖ್ಯವಾಗಿ ರಾಷ್ಟ್ರೀಯವಾದಿ ಬರಹಗಳಿಗಿಂತ ಭಿನ್ನವಾದ ನೆಲೆಗಳನ್ನು ಹೊಂದಿದೆ. ಭಾಷಾ ರಾಜಕಾರಣ, ಸಂಸ್ಕೃತಿ ರಾಜಕಾರಣ, ಸಾಮಾಜಿಕ ಅಂಶಗಳ ಮೇಲೆ ಪ್ರಭಾವ ಬೀರಿದ್ದನ್ನು ಸೂಕ್ಷ್ಮವಾಗಿ ಅವರ ಬರಹಗಳಲ್ಲಿ ಕಾಣಬಹುದು.

ಸಾಮಾಜಿಕವಾಗಿ ಪ್ರಾಬಲ್ಯ ಹೊಂದಿದ ಸಮುದಾಯಗಳು ಆರ್ಥಿಕವಾಗಿಯೂ ಸದೃಢವಾಗಿರುತ್ತವೆ. ಆರಂಭ ಕಾಲದಲ್ಲಿ ಬ್ರಾಹ್ಮಣ್ಯದ ಉಲ್ಲೇಖಗಳು ಕಂಡು ಬಂದಿರುವುದು ಅತಿ ಕಡಿಮೆ. ಕ್ರಿ.ಪೂ ಆರನೇ ಶತಮಾನದಿಂದ ಕ್ರಿ.ಶ.ಮೂರನೇ ಶತಮಾನದವರೆಗೆ ಬ್ರಾಹ್ಮಣ್ಯ ಶೂನ್ಯವಾಗಿತ್ತು ಎಂದು ಪ್ರೊ.ಶೆಟ್ಟರ್ ಪ್ರತಿಪಾದಿಸಿದ್ದಾರೆ. ವೈದಿಕರಿಗೂ ಸಂಸ್ಕೃತ ವ್ಯವಹಾರಕ್ಕೂ ಇದ್ದ ಸಂಬಂಧವು ಈ ಕಾಲದಲ್ಲಿ ಗಾಢವಾಗಿರಲಿಲ್ಲ. ಸಂಸ್ಕೃತ ಭಾಷಾ ವ್ಯವಹಾರವು ಲಿಖಿಸುವುದನ್ನೇ ವೃತ್ತಿಯನ್ನಾಗಿಸಿಕೊಂಡಿದ್ದ ಆಚಾರ್ಯರು, ತ್ವಷ್ಟರು, ವಿಶ್ವಕರ್ಮಿಗಳೆಂಬ ಬ್ರಾಹ್ಮಣೇತರ ಸಮುದಾಯಗಳ ದ್ವಿಜರ ವಶದಲ್ಲಿದ್ದವು, ಬರವಣಿಗೆಯ ಮಾಧ್ಯಮವನ್ನು ರೂಢಿಸಿಕೊಳ್ಳಲು ವೈದಿಕರು ಆಸಕ್ತಿ ತೋರಿದ್ದು ಕಡಿಮೆ. ಕವಿಗಳಾಗಿ, ಸಾಹಿತಿಗಳಾಗಿ, ವೈಚಾರಿಕರಾಗಿ ವೈದಿಕರು ಹೆಸರು ಮಾಡಿದ್ದು ತುಂಬಾ ಕಡಿಮೆ ಎಂದು ಷ.ಶೆಟ್ಟರ್ ಅವರು ಅಭಿಪ್ರಾಯಪಟ್ಟಿದ್ದಾರೆ. ನಾಲ್ಕರಿಂದ ಎಂಟನೇ ಶತಮಾನದಲ್ಲಿ ವೈದಿಕರಿಗೆ ಮೀಸಲಾಗಿದ್ದ ದಾನದತ್ತಿಗಳು ಎಂಟನೇ ಶತಮಾನದ ನಂತರ ಬ್ರಾಹ್ಮಣೇತರ ಸಮುದಾಯಗಳಿಗೂ ವಿಸ್ತರಿಸಿಕೊಂಡಿದ್ದು ಈ ಸಮುದಾಯಗಳ ಆರ್ಥಿಕ ಪ್ರಾಬಲ್ಯವನ್ನು ನಿರೂಪಿಸುತ್ತದೆ.

'ನಾವು ಶಿಲ್ಪವನ್ನು ಅಭ್ಯಸಿಸಿದ್ದೇವೆ, ಆದರೆ ಶಿಲ್ಪಿಗಳನ್ನು ಮರೆತಿದ್ದೇವೆ; ಲಿಪಿಯನ್ನು ಅಭ್ಯಸಿಸಿದ್ದೇವೆ ಲಿಪಿಕಾರರನ್ನು ಮರೆತಿದ್ದೇವೆ' ಎಂದು ಹೇಳುವ ಮೂಲಕ ಪ್ರೊ.ಶೆಟ್ಟರ್ ಅವರು ಚರಿತ್ರೆಯಲ್ಲಿ ಸಾಮಾಜಿಕ ಸಂರಚನೆಯ ವೃತ್ತಿ ವರ್ಗಗಳಾದ ಶಿಲ್ಪಿಗಳು, ವಾಸ್ತುಶಿಲ್ಪಿಗಳು, ಲೋಹಶಿಲ್ಪಿಗಳು, ಕೆಲಸಗಳ ಮೇಲುಸ್ತುವಾರಿಯನ್ನು ಮಾಡುವವರು, ತರಬೇತಿ ನೀಡುವವರು, ಶಾಸನ ಕಂಡರಿಸುವವರು, ಇವರಿಗೆ ಪ್ರಾತಿನಿಧಿಕರಣ ನೀಡಿದ್ದಾರೆ. ಪ್ರೊ.ಶೆಟ್ಟರ್ ಅವರ ಸುಮಾರು ಐವತ್ತು ವರ್ಷಗಳ ನಿರಂತರ ಸಂಶೋಧನೆಯಲ್ಲಿ ಕುಶಲಕರ್ಮಿಗಳಿಗೆ ಇವರಷ್ಟು ಪ್ರಾತಿನಿಧ್ಯ ನೀಡಿದ ಚರಿತ್ರೆಕಾರರು ಮತ್ತೊಬ್ಬರಿಲ್ಲ. ಶ್ರವಣಬೆಳಗೊಳ, ಹೊಯ್ಸಳರ ವಾಸ್ತುಶಿಲ್ಪ, ಕಪ್ಪೆ ಅರಭಟ್ಟನ ಶಾಸನ, ಬಾದಾಮಿ ಚಾಲುಕ್ಯರ ಶಾಸನ ಸಾಹಿತ್ಯ, ರೂವಾರಿ, ಸ್ಥಪತಿ ಕೃತಿಗಳು ಬಹುತೇಕವಾಗಿ ಕುಶಲಕರ್ಮಿಗಳನ್ನು ಹಿನ್ನೆಲೆಯಾಗಿಸಿಕೊಂಡ ಸಂಶೋಧನೆಗಳಾಗಿವೆ. ಈ ಮೂಲಕ ಚರಿತ್ರೆಯಲ್ಲಿ ಈ ವರ್ಗಕ್ಕೆ ಬಹುದೊಡ್ಡ ಸ್ಥಾನ ನೀಡಿದ್ದಾರೆ. ಕರ್ನಾಟಕದ ನಾಗರಿಕತೆ ಮತ್ತು ಸಂಸ್ಕೃತಿಯನ್ನು ರೂಪಿಸುವಲ್ಲಿ ಶ್ರಮಿಸಿದ ಕುಶಲಕರ್ಮಿಗಳ ಚರಿತ್ರೆಯು ಮರೆಯಾಗುತ್ತಿರುವ ಹೊತ್ತಿನಲ್ಲಿ ಪ್ರೊ.ಷ.ಶೆಟ್ಟರ್ ಆ ಕ್ಷೇತ್ರದ ಏಕಾಂಗಿ ಸಂಶೋಧಕರಾಗಿ ಸಂಶೋಧನೆಗಳನ್ನು ಕೈಗೊಂಡಿದ್ದಾರೆ.

ಬ್ರಾಹ್ಮಣ, ಕ್ಷತ್ರಿಯ ವರ್ಗಗಳನ್ನೇ ಕೇಂದ್ರವಾಗಿರಿಸಿಕೊಂಡ ಚರಿತ್ರೆ ಲೇಖನಾಶಾಸ್ತ್ರದ ಬದಲಾಗಿ ದ್ವಿಜರಾಗಿದ್ದೂ ಬ್ರಾಹ್ಮಣೇತರಾಗಿದ್ದ ವಿಶ್ವಕರ್ಮರು ಹಾಗೂ ಶೂದ್ರರನ್ನು ಶೆಟ್ಟರ್ ಚರಿತ್ರೆಯ ಮುನ್ನೆಲೆಗೆ ತರುತ್ತಾರೆ. ಅಧಿಕಾರ, ವರ್ಣಜಾತಿ ವ್ಯವಸ್ಥೆ, ಭಾಷೆ, ಬರಹ, ಇವುಗಳ ಸಂಕೀರ್ಣ ಸಂಬಂಧಗಳನ್ನು ಗುರುತಿಸಿದ್ದಾರೆ.

**ಪರಾಮರ್ಶನ ಗ್ರಂಥಗಳು:**

1. ಶೆಟ್ಟರ್, ಷ. 1981, ಶ್ರವಣಬೆಳಗೊಳ, ಬೆಂಗಳೂರು.
2. ಶೆಟ್ಟರ್, ಷ. 2007, ಶಂಗಂ ತಮಿಳಗಂ ಮತ್ತು ಕನ್ನಡ ನಾಡು–ನುಡಿ: ಆರಂಭ ಕಾಲದ ದ್ರಾವಿಡ ಸಂಬಂಧದ ಚಿಂತನೆ, ಅಭಿನವ ಪ್ರಕಾಶನ, ಬೆಂಗಳೂರು.
3. ಶೆಟ್ಟರ್, ಷ. 2008, ಸೋಮನಾಥಪುರ, ಅಭಿನವ ಪ್ರಕಾಶನ, ಬೆಂಗಳೂರು.
4. ಶೆಟ್ಟರ್, ಷ. 2011, ಕಪ್ಪೆಅರಭಟ್ಟನ ಶಾಸನ, ಅಭಿನವ ಪ್ರಕಾಶನ, ಬೆಂಗಳೂರು.
5. ಶೆಟ್ಟರ್, ಷ. 2012, ಬಾದಾಮಿ ಚಾಲುಕ್ಯರ ಶಾಸನ ಸಾಹಿತ್ಯ, ಅಭಿನವ ಪ್ರಕಾಶನ, ಬೆಂಗಳೂರು.
6. ಶೆಟ್ಟರ್, ಷ. 2012, ಸಾವಿಗೆ ಆಹ್ವಾನ: ಶ್ರವಣಬೆಳಗೊಳದ ಧಾರ್ಮಿಕ ಇತಿಹಾಸದ ಹಿನ್ನೆಲೆಯಲ್ಲಿ ಮರಣ ಪ್ರಕ್ರಿಯೆಯ ಅಭ್ಯಾಸ [ಕನ್ನಡಕ್ಕೆ ಸದಾನಂದ ಕನವಳ್ಳಿ ಮತ್ತು ಷ. ಶೆಟ್ಟರ್], ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
7. ಶೆಟ್ಟರ್, ಷ. 2014, ಸಾವನ್ನು ಅರಸಿ: ಇಚ್ಛಾಮರಣದ ಜೈನಸಿದ್ಧಾಂತ ಮತ್ತು ಚಾರಿತ್ರಿಕ ಸಾದೃಶ್ಯಗಳು [ಕನ್ನಡಕ್ಕೆ ಓ.ಎಲ್. ನಾಗಭೂಷಣಸ್ವಾಮಿ], ಅಭಿನವ ಪ್ರಕಾಶನ, ಬೆಂಗಳೂರು.
8. ಶೆಟ್ಟರ್, ಷ. 2014, ಸಾವನ್ನು ಸ್ವಾಗತಿಸಿ: ಶ್ರವಣಬೆಳಗೊಳ ಇತಿಹಾಸದ ಹಿನ್ನೆಲೆಯಲ್ಲಿ ಇಚ್ಛಾಮರಣ ಪ್ರಕ್ರಿಯೆ [ಕನ್ನಡಕ್ಕೆ ಸದಾನಂದ ಕನವಳ್ಳಿ ಮತ್ತು ಷ. ಶೆಟ್ಟರ್], ಅಭಿನವ ಪ್ರಕಾಶನ, ಬೆಂಗಳೂರು.
9. ಶೆಟ್ಟರ್, ಷ. 2014, ಹಳಗನ್ನಡ: ಲಿಪಿ, ಲಿಪಿಕಾರ ಲಿಪಿ ವ್ಯವಸಾಯ, ಸಂಪುಟ– 1, ಅಭಿನವ ಪ್ರಕಾಶನ, ಬೆಂಗಳೂರು.
10. ಶೆಟ್ಟರ್, ಷ.(ಸಂ.) 2017, ಹಳಗನ್ನಡ: ಭಾಷೆ, ಭಾಷಾ ವಿಕಾಸ, ಭಾಷಾ ಬಾಂಧವ್ಯ ಸಂಪುಟ–2, ಅಭಿನವ ಪ್ರಕಾಶನ, ಬೆಂಗಳೂರು.
11. ಅರುಣಿ ಎಸ್.ಕೆ. ಕನ್ನಡದ 'ಇತಿಹಾಸ ಮಾರ್ಗಕಾರ' ಪ್ರೊಫೆಸ್ಸರ್ ಷ.ಶೆಟ್ಟರ್
12. ಗೋವಿಂದರಾಜು ಸಿ.ಆರ್. ಪ್ರೊ.ಎಸ್.ಶೆಟ್ಟರ್: ಸಂಶೋಧನಾ ಬಿರುನುಡಿಯ 'ರೂವಾರಿ'

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.